OS-32/2023
Commissioner witness/CW-1

ದಿನಾಂಕ 19.09.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

| | |
|---|---|
| **ಹೆಸರು** | ವಿವೇಕಾನಂದ |
| **ತಂದೆ ಹೆಸರು** | ಬಸಯ್ಯ |
| **ವಯಸ್ಸು** | 40-ವರ್ಷಗಳು |
| **ಉದ್ಯೋಗ** | ತಾಲೂಕ ಸರ್ವೆಯರ |
| **ವಾಸ ಸ್ಥಳ** | ಯಡ್ರಾಮಿ |

**ಮುಖ್ಯ ವಿಚಾರಣೆಃ**

ನನ್ನನ್ನು ADLR Yadrami ರವರು ಕೋರ್ಟ ಕಮೀಷನರ ಆಗಿ ನೇಮಕ ಮಾಡಿರುತ್ತಾರೆ. ದಿನಾಂಕ 24.06.2025 ರಂದು ಅರ್ಜಿದಾರರಿಗೆ ಹಾಗೂ ಎದುರುದಾರರಿಗೆ ನೊಂದಾಯಿತ ಅಂಚೆ ಮೂಲಕ ನೋಟಿಸು ನೀಡಿರುತ್ತೇನೆ. ಸ್ಥಳದಲ್ಲಿ ವಾದಿ ಹಾಗೂ 5ನೆ ಪ್ರತಿವಾದಿಯರು ಹಾಜರಿದ್ದರು.

ಮಾನಶಿವಣಗಿ ಗ್ರಾಮದ ಸರ್ವೆ ನಂ.6 ನ್ನು ನ್ಯಾಯಾಲಯದ ಆದೇಶದ ಪ್ರಕಾರ ಅಳತೆ ಮಾಡಲು ಹೇಳಿರುತ್ತಾರೆ. ಅದರಂತೆ ನಾನು ದಿನಾಂಕ 24.06.2025 ರಂದು ಅಳತೆ ಮಾಡಲು ಸಲಕರಣೆಗಳ ಜೊತೆ ದಾವಾ ಜಮೀನಿಗೆ ಹೋಗಿರುತ್ತೇನೆ. ಸರ್ವೆ ನಂ.6/1 ರಲ್ಲಿ ಸರಕಾರಿ ಪ್ರಾಥಮಿಕ ಶಾಲೆಯಿದ್ದು ಪಹಣಿಯಲ್ಲಿ 01-ಎಕರೆ 04-ಗುಂಟೆ ಜಮೀನು ಇದ್ದು ವಾಸ್ತವವಾಗಿ ಶಾಲಾ ಕಂಪೌಂಡ ಸೇರಿ 01-ಎಕರೆ 17-ಗುಂಟೆ ಕಬ್ಜೆಯಲ್ಲಿರುತ್ತದೆ.

ನಾನು ಮುಂಜಾನೆ 11.00 ರಿಂದ 12.30 ಗಂಟೆವರೆಗೆ ಅಳತೆ ಕೆಲಸ ಮಾಡಿ ವಾದಿ, 5ನೆ ಪ್ರತಿವಾದಿ ಮತ್ತು ಪಂಚರಾದ ಕಲ್ಯಾಣಿ ತಂದೆ ವಿಠೋಬಾ ಮತ್ತು ಇನ್ನೊಬ್ಬ ಸಾಕ್ಷಿದಾರನ ಸಹಿ ಪಡೆದಿರುತ್ತೇನೆ.

ಕಮೀಷನರ ವಾರಟಂನ್ನು ನಿಪಿ-1 ಎಂದು ಗುರುತಿಸಲಾಯಿತು. 09 ಅಂಚೆ ರಸೀದಿಗಳನ್ನು ಒಟ್ಟಾಗಿ ನಿಪಿ-2 ಎಂದು ಗುರುತಿಸಲಾಯಿತು. ಹೇಳಿಕೆಯನ್ನು ನಿಪಿ-3 ಎಂದು

ಗುರುತಿಸಲಾಯಿತು. ಸರ್ವೆ ನಂ.6 ರ ಸ್ಕೆಚ್ ನಕಾಶೆಯನ್ನು ನಿಪಿ-4 ಎಂದು ಗುರುತಿಸಲಾಯಿತು.

<u>ಪಾಟಿ ಸವಾಲುಃ ಸ.ಸ.ಅ. ರಿಂದಃ</u>

ಪಂಚನಾಮೆ ಬಗ್ಗೆ ಯಾವುದೆ ವರದಿ ಸಲ್ಲಿಸಿರುವುದಿಲ್ಲ. ನಿರ್ದಿರ್ಷವಾಗಿ ಶಾಲಾ ಕಂಪೌಂಡ ಎಷ್ಟು ವಿಸ್ತೀರ್ಣ ಇದ್ದ ಬಗ್ಗೆ ವರದಿ ನೀಡಿಲ್ಲ. ಯಾವ ಸರ್ವೆ ನಂಬರನಲ್ಲಿ ಎಷ್ಟು ಜಾಗ ಕಬ್ಜೆ ಮಾಡಿದ ಬಗ್ಗೆ ನನ್ನ ಹೇಳಿಕೆಯಲ್ಲಿ ನಮೂದಿಸಿಲ್ಲ ಆದರೆ ಸ್ಕೆಚ್ ನಕಾಶೆಯಲ್ಲಿ ನಮೂದಿಸಿರುತ್ತೇನೆ. ನಾನು ನೋಟಿಸು ನೀಡಿದ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ವಾದಿಯ ನಕಾಶೆ ಮತ್ತು ಸರ್ವೆ ದಾಖಲೆಗಳನ್ನು ಪರಿಶೀಲಿಸಿ ಅಳತೆ ಮಾಡಿರುತ್ತೇನೆ. ನಿಮಗೆ ಜಿಪಿಎಸ್ ಮೂಲಕ ಅಳತೆ ಮಾಡಲು ತೊಂದರೆ ಇತ್ತಾ ಎಂದರೆ ಇರಲಿಲ್ಲ ಆದರೆ ನಾನು ಖುದ್ದಾಗಿ ಅಳತೆ ಮಾಡಿರುತ್ತೇನೆ. ನೀರಿನ ಟ್ಯಾಂಕುಗಳ ಬಗ್ಗೆ ನಾನು ಅಳತೆ ಮಾಡಿಲ್ಲ. ಸರ್ವೆ ನಂ.6/ಎ2 ರಲ್ಲಿ ದಾವಾ ಜಮೀನು ಇದ್ದ ಬಗ್ಗೆ ನಕಾಶೆಯಲ್ಲಿ ನಮೂದಿಸಿದ್ದೀರಾ ಎಂದರೆ ಸಾಕ್ಷಿ ಪ್ರಸ್ತುತವಾಗಿ ಇರುವ ಹಿಸ್ಸೆಗಳನ್ನು ನಮೂದಿಸಿರುತ್ತೇನೆ. ಪ್ರತಿವಾದಿಯರು 13-ಗುಂಟೆ ಜಮೀನು ಅತಿಕ್ರಮಣ ಮಾಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ. ಪ್ರತಿವಾದಿಯರು ವಾದಿಯರ ಜಮೀನು ಅತಿಕ್ರಮಣ ಎಂದು ಸುಳ್ಳು ಹೇಳುತ್ತಿದ್ದೇನೆ. 5ನೆ ಪ್ರತಿವಾದಿಯ ಸಮಕ್ಷಳು ಅಳತೆ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ವಾದಿಯೊಂದಿಗೆ ಶಾಮೀಲಾಗಿ ಸುಳ್ಳು ಕಮೀಷನರ ವರದಿ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮಾನ್ಯ ಸ.ಸ.ಅ. ಮುಂದುವರೆದ ಪಾಟಿ ಸವಾಲಿಗೆ ಕಾಲಾವಕಾಶ ಕೋರಿದ್ದು ಮುಂದೂಡಲಾಯಿತು.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ.ಇದೆ.

ಸಿವಿಲ್ ನ್ಯಾಯಾಧೀಶರು
ಜೇವರ್ಗಿ